## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| ಎಸ್ ಸಿ : | **268/21** |
|---|---|

| | | |
|---|---|---|
| ಸಾಕ್ಷಿದಾರರ ಹೆಸರು | ಪೂಜಶ್ರೀ | |
| ತಂದೆಯ ಹೆಸರು | ಮಹದೇವಯ್ಯಾ | ಸಾಕ್ಷಿಗೆ ದಿಃ **07.09.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **20** ವರ್ಷ | |
| ಉದ್ಯೋಗ | ನರ್ಸಿಂಗ್ ವಿದ್ಯಾರ್ಥಿನಿ | ಪಿ.ಡಬ್ಲ್ಯೂ **-01** |
| ವಾಸ ಸ್ಥಳ | ಮುಂಗೂರು ಗ್ರಾಮ, ಟಿ.ನರಸೀಪುರ ತಾಲ್ಲೂಕು. | ಸಿ.ಡಬ್ಲ್ಯೂ **-01** |

### ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಆರೋಪಿತನನ್ನು ಸಾಕ್ಷಿ ವಿ.ಸಿ ಯಲ್ಲಿ ನೋಡಿ ಗುರುತಿಸಿರುತ್ತಾರೆ. ನನಗೆ ಚಾಸ್-2 ರಿಂದ ಚಾಸ್-15 ಇವರ ಪರಿಚಯ ಇರುತ್ತದೆ. ನಾವು ನಮ್ಮ ತಾಯಿಗೆ ಇಬ್ಬರು ಮಕ್ಕಳು ಇರುತ್ತೇವೆ. ನಮ್ಮ ತಂದೆ ಲಾರಿ ಚಾಲಕನಾಗಿ ಊಟಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ಪೊಲೀಸರಿಗೆ ಪಿರ್ಯಾದಿ ಕೊಟ್ಟಿರುತ್ತೇನೆ. ನನ್ನ ತಂದೆ ಹೆಸರು ಮಹದೇವಯ್ಯಾ ತಾಯಿ ಹೆಸರು ಭಾಗ್ಯಲಕ್ಷ್ಮೀ, ನಮ್ಮ ತಂದೆ-ತಾಯಿಗೆ ನಾವು ಇಬ್ಬರು ಮಕ್ಕಳು ಒಂದು ನಾನು, ಎರಡು ನನ್ನ ತಮ್ಮ ಶ್ರೇಯಸ್ ಇರುತ್ತೇವೆ. ನನ್ನ ತಮ್ಮ ಶ್ರೇಯಸ್ ಈತನು 6 ನೇ ತರಗತಿಯಲ್ಲಿ ಓದುತ್ತಿದ್ದನು, ನಮ್ಮ ತಂದೆ-ತಾಯಿ ಮಧ್ಯೆ ಬಿನಾಭಿಪ್ರಾಯ ಬಂದು ವಿಚ್ಚೇಧನಕ್ಕಾಗಿ ಅರ್ಜಿ ಸಲ್ಲಿಸಿದ್ದರು, ನಮ್ಮ ತಂದೆ ಮಹದೇವಯ್ಯಾ ಲಾರಿ ಚಾಲಕನಾಗಿ ಊಟಿಯಲ್ಲಿ ಇರುತ್ತಾರೆ. ನನ್ನ ತಾಯಿ ಭಾಗ್ಯಲಕ್ಷ್ಮೀ ಮೈಸೂರು ಬನ್ನಿಮಂಟಪದಲ್ಲಿ ಇರುವ ಪ್ಲಾನಿವಲ್ ಕ್ಲಾಥಿಂಗ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು, ಅವರು ಬೆಳಿಗ್ಗೆ 7.00 ಗಂಟೆಗೆ ಕೆಲಸಕ್ಕೆ ಹೋಗಿ ಸಂಜೆ 7.00 ಗಂಟೆಗೆ ಬರುತ್ತಿದ್ದರು, 6 ತಿಂಗಳಿಂದ ನನ್ನ ತಾಯಿ ಕೆಲಸಕ್ಕೆ ಹೋಗುತ್ತಿರಲಿಲ್ಲ. ಮನೆಯಲ್ಲಿ ಇದ್ದರು, ದಿಃ 25.08.2021 ರಂದು ಸಂಜೆ 5.45 ಗಂಟೆಗೆ ವಾಕಿಂಗ್ ಹೋಗುತ್ತೇನೆ ಎಂದು ತಿಳಿಸಿ ಮನೆಯಿಂದ ಹೋದರು, ನಮ್ಮ ತಾಯಿ ಸುಮಾರು ಗಂಟೆ ಆದರೂ ಮನೆಗೆ ಬರಲಿಲ್ಲ, ಆದ ಕಾರಣ ನಾವು ಸುತ್ತಮುತ್ತ

ವಿಚಾರಿಸಿದೆವು, ಎಲ್ಲಿಯೂ ಪತ್ತೆ ಆಗಲಿಲ್ಲ. ದಿಃ 26.08.2021 ರಂದು ಸುಮಾರು ಮಧ್ಯಾಹ್ನ 3.00 ಗಂಟೆಗೆ ನಮ್ಮ ತಮ್ಮನಿಗೆ ನಿಮ್ಮ ತಾಯಿಯ ಶವ ಕಾಲುವೆಯ ಬಳಿ ಬಿದ್ದಿದ್ದೆ ಎಂದು ತಿಳಿಸಿದರು, ಆಗ ನಮ್ಮ ತಮ್ಮ ನನಗೆ ಈ ವಿಷಯ ತಿಳಿಸಿದನು, ಆಗ ನಾನು, ನನ್ನ ತಮ್ಮ, ನನ್ನ ತಾತ್ ಮಾದಯ್ಯಾ ಮತ್ತು ಊರಿನ ಜನರು ಕಾಲುವೆಯ ಬಳಿ ಹೋಗಿ ನೋಡಲಾಗಿ ಅಲ್ಲಿ ನಮ್ಮ ತಾಯಿಯ ಶವ ಬಲಮಗ್ಗಲಾಗಿ ಗೋಣಿ ಚೀಲದಿಂದ ಮುಖವನ್ನು ಮುಚ್ಚಿದ್ದು ಇತ್ತು, ಮತ್ತು ಕುತ್ತಿಗೆಯ ಬಳಿ ಹರಿತವಾದ ಆಯುಧದಿಂದ ಕೊಯ್ದು ಮಾದರಿಯ ಗಾಯ ಇತ್ತು ಮತ್ತು ಗಲ್ಲ, ಎಡಗಡೆ ಕೆನ್ನೆ, ಹುಬ್ಬಿನ ಮೇಲೆ ಮತ್ತು ಕೆನ್ನೆಯ ಮೇಲೆ ಕೊಯ್ದು ಗಾಯ ಇದ್ದು, ಯಾವುದೋ ಆಯುಧದಿಂದ ಹೊಡೆದ ಗಾಯ ಇತ್ತು, ಸುತ್ತ -ಮುತ್ತ ನೋಡಲಾಗಿ ಹೊಸಹಳ್ಳಿಗೆ ಹೋಗುವ, ರಸ್ತೆ ಇದ್ದು, ರೋಜಾ ಗಿಡಗಳ ಮಧ್ಯೆ ರಕ್ತದ ಕಲೆ ಹತ್ತಿರುವ ಎಲೆಗಳು ಮತ್ತು ಉದ್ದನೆ ಕೂದಲು ಮಿಶ್ರಿತ್ ಎಲೆ ಕಡ್ಡಿಗಳು ಇದ್ದವು, ನನ್ನ ತಾಯಿಯ ಒಂದು ಜೊತೆ ಚಪ್ಪಲಿ ಇದ್ದವು, ಕಾಫಿ ಬಣ್ಣದ ಬಳೆ ಚೂರುಗಳು ಇದ್ದವು, ಲೈಟ್ ಖಾಕಿ ಬಣ್ಣದ ಛತ್ರಿ, ರಕ್ತದ ಕಲೆ ಆಗಿರುವ ಮಣ್ಣು ಇತ್ತು. ಯಾರೋ ದುಷ್ಕರ್ಮೀಗಳು ನನ್ನ ತಾಯಿಯನ್ನು ಕೊಲೆ ಮಾಡಿರುತ್ತಾರೆ ಎಂದು ಸ್ಥಳದಲ್ಲಿ ಬಂದ ಪೊಲೀಸರಿಗೆ ಪಿರ್ಯಾದಿ ಕೊಟ್ಟಿರುತ್ತೇನೆ. ಪಿರ್ಯಾದಿಯನ್ನು ನಿಪಿ-1 ಎಂದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ಸ್ಥಳದ ಮಹಜರ ಮಾಡಿರುತ್ತಾರೆ. ಸ್ಥಳದ ಮಹಜರನ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಮಹಜರನ್ನು ನಿಪಿ-2 ಎಂದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಪೊಲೀಸರು ಸ್ಥಳದ ಪಂಚನಾಮೆಯ ಕಾಲಕ್ಕೆ ಪೊಲೀಸರು ಮುದ್ದೆಮಾಲುಗಳನ್ನು ಜಪ್ತಿ ಮಾಡಿದ್ದಾರೆ ಎಂದು ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲುಗಳನ್ನು ಗುರುತಿಸಿದ್ದು, ರಕ್ತದ ಕಲೆಯಾಗಿರುವ ಗಿಡ-ಗಂಟೆಯ ಎಲೆಗಳು, ಉದ್ದನೇಯ ಕೂದಲು ಮಿಶ್ರೀತ್ ಗಿಡ-ಗಂಟೆಗಳ ಎಲೆಗಳು, ಎಂ.ಓ-1 ಎಂದು, ಖಾಕಿ ಬಣ್ಣದ ಬಳೆ ಚೂರುಗಳು, ಎಂ.ಓ-2 ಎಂದು, ಒಂದು ಜೊತೆ ಚಪ್ಪಲಿಯನ್ನು ಎಂ.ಓ-3 ಎಂದು, ಖಾಕಿ ಬಣ್ಣದ ಛತ್ರಿಯನ್ನು ಎಂ.ಓ-4 ಎಂದು, ಸ್ಯಾಂಪಲ್ ಮಣ್ಣು ಎಂ.ಓ-5 ಎಂದು, ರಕ್ತ ಮಿಶ್ರೀತ್ ಮಣ್ಣು ಎಂ.ಓ-6 ಎಂದು, ಗೋಣಿ ಚೀಲ್ ಎಂ.ಓ-7 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ತಾಯಿಯ ಶವದ ಮೇಲೆ ಇದ್ದ ನೈಟಿ ನೋಡಿ ಗುರುತಿಸಿದ್ದು, ಅದನ್ನು

ಎಂ.ಓ-8 ಎಂದು, ಸ್ಥಳದ ಪಂಚನಾಮೆಯ ಕಾಲದಲ್ಲಿ ತೆಗೆದ 9 ಫೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-3 ರಿಂದ ನಿಪಿ-11 ಎಂದು ಗುರುತಿಸಲಾಯಿತು. ಆರೋಪಿತನು ನಮ್ಮ ಮನೆಯ ಪಕ್ಕದ ಮನೆಯವನು ಇದ್ದು, ಯಾವಾಗಲು ನನ್ನನ್ನು ಪ್ರೀತಿಸು ಎಂದು ಒತ್ತಾಯ ಮಾಡುತ್ತಿದ್ದನು, ನಾನು ಕಾಲೇಜಿಗೆ ಹೋಗಿ ಬರುವಾಗ ನನ್ನನ್ನು ಹಿಂಭಾಲಿಸುತ್ತಿದ್ದನು, ನಾನು ನನ್ನನ್ನು ಹಿಂಭಾಲಿಸಬೇಡ, ನಾನು ನನ್ನ ತಾಯಿಗೆ ಹೇಳುತ್ತೇನೆ ಎಂದು ಆರೋಪಿಗೆ ಹೇಳಿದೆನು. ನಂತರ ಸದರಿ ವಿಷಯವನ್ನು ನಾನು ನನ್ನ ತಾಯಿಗೆ ಹೇಳಿದೆನು, ನನ್ನ ತಾಯಿ ನಾನು ನಿನಗೆ ಸರ್ಕಾರಿ ನೌಕರಗೆ ಕೊಟ್ಟು ಮದುವೆ ಮಾಡಿಕೊಡುತ್ತೇನೆ ನೀನು ಅವನನ್ನು ಹಿಂಭಾಲಿಸಬೇಡ ಎಂದು ಹೇಳಿದಳು. ಆ ವಿಷಯವನ್ನು ಆರೋಪಿಗೆ ತಿಳಿಸಿದೆನು, ಆರೋಪಿತನು ನಿಮ್ಮ ತಾಯಿಗೆ ಒಂದು ಗತಿಕಾಣಿಸುತ್ತೇನೆ ಎಂದು ಹೇಳಿದನು ಮತ್ತು ನಿನ್ನನ್ನು ಯಾರು ಮದುವೆ ಆಗದಂತೆ ಮಾಡುತ್ತೇನೆ ಎಂದು ಆರೋಪಿ ನನಗೆ ಹೇಳಿದನು. ನಮ್ಮ ತಾಯಿ ವಾಕಿಂಗ್ ಗೆ ಹೋದಾಗ ಮಹದೇವಸ್ವಾಮಿ ಬಂದಿದ್ದರು, ನಿಮ್ಮ ತಾಯಿ ರೂ. 500/- ಕೊಡಲಿಕೆ ಹೇಳಿದ್ದಾರೆ ಎಂದು ಹೇಳಿ ರೂ. 500/- ನನಗೆ ಕೊಟ್ಟು ಹೋದರು, ಸ್ವಲ್ಪ ಹೊತ್ತು ಆದ ನಂತರ ನನಗೆ ಫೋನ್ ಮಾಡಿ ನಿಮ್ಮ ತಾಯಿ ಮನೆಗೆ ಬರಲಿಲ್ಲವಾ ಎಂದು ಕೇಳಿದರು. ರಸ್ತೆಯ ಮೇಲೆ ಯಾರದೋ ಗೆಜ್ಜೆ ಶಬ್ದ ಆಯಿತು, ನಮ್ಮ ತಾಯಿ ಬಂದಿದ್ದಾಳೆ ಎಂದು ತಿಳಿದುಕೊಂಡು ಮಹದೇವಸ್ವಾಮಿಗೆ ನಮ್ಮ ತಾಯಿ ಬಂದಿದ್ದಾಳೆ ಎಂದು ಹೇಳಿರುತ್ತೇನೆ. ನಂತರ ನಾನು ಫೋನ್ ಮಾಡಿ ನನ್ನ ತಾಯಿ ಬಂದಿಲ್ಲ ಎಂದು ಹೇಳಿರುತ್ತೇನೆ. ಮಹದೇವಸ್ವಾಮಿ ಮತ್ತು ನಂತರ ನಮ್ಮ ತಮ್ಮ ಮತ್ತು ನಾಗರಾಜ ನಮ್ಮ ತಾಯಿಯನ್ನು ನೋಡಲು ಹೋದರು. ಆರೋಪಿತನು ಗಾಭರಿಯಾಗಿ ಕಾಲುವೆ ಕಡೆಯಿಂದ ಸೈಕಲ್ ನಲ್ಲಿ ಕುದ್ದಲಿ ಸಿಗಿಸಿಕೊಂಡು ಊರಿನ ಕಡೆಗೆ ಬರುತ್ತಿದ್ದನು ಎಂದು ಮಹದೇವಸ್ವಾಮಿ ನನಗೆ ತಿಳಿಸಿದರು. ನಂತರ ಮರು ದಿನ ಮುಂಜಾನೆ ಕೂಡಾ ಮಹದೇವಸ್ವಾಮಿ ಮತ್ತು ನನ್ನ ತಮ್ಮ ತಾಯಿಯನ್ನು ಹುಡುಕಿದರು ಅವರಿಗೆ ಯಾವುದೇ ಸುಳಿವು ಸಿಗಲಿಲ್ಲ, ಸುಮಾರು ಮಧ್ಯಾಹ್ನ 3.00 ಗಂಟೆಗೆ ಊರಿನವರು ನಿಮ್ಮ ತಾಯಿಯ ಶವ ಸಿಕ್ಕಿದೆ ಎಂದು ಹೇಳಿದರು. ಆರೋಪಿತನು ನಮ್ಮ ತಾಯಿಯ ಕೊಲೆ ಮಾಡಿದ್ದಾನೆ ಎಂದು ನನಗೆ ಗೊತ್ತಾಗಿರುತ್ತದೆ. ವಿ.ಸಿ ಯಲ್ಲಿ ಕಾಣುವ ಆರೋಪಿತನು ನಮ್ಮ ತಾಯಿಗೆ ಕೊಲೆ ಮಾಡಿದ ಆರೋಪಿ ಇರುತ್ತಾನೆ.

**ಪಾಟೀಸವಾಲು :- ಆರೋಪಿ ಪರ ವಕೀಲರಾದ ಎಮ್.ಎಸ್.ಬಿ ರವರಿಂದಃ-**

ನಮ್ಮ ತಂದೆ-ತಾಯಿ ವಿವಾಹ ವಿಚ್ಚೇಧನ ಅರ್ಜಿ ನ್ಯಾಯಾಲಯದಲ್ಲಿ ನಾನು 5 ನೇ ತರಗತಿ ಓದುತ್ತಿದ್ದಾಗ ಸಲ್ಲಿಸಿದರು. ವಿವಾಹ ವಿಚ್ಚೇಧನ ತೀರ್ಪು ಆಗಿರಲಿಲ್ಲ. ನಮ್ಮ ತಂದೆ-ತಾಯಿಯ ಊರು ಮುಂಗೂರು ಗ್ರಾಮ ಇರುತ್ತದೆ, ನಮ್ಮ ತಂದೆಯ ತಂದೆ ಜೀವಂತ ಇದ್ದಾಗಲೇ ತಮಿಳುನಾಡು ರಾಜ್ಯದ ಊಟಿನಗರದ ಹತ್ತಿರ ಇರುವ ಗೂಡ್ಲೂರಿನ ಬಾರೋಟ್ ನಲ್ಲಿ ವಾಸವಾಗಿದ್ದರು.

ಆರೋಪಿತನು ನನಗೆ ಒಂದು ವರ್ಷದಿಂದ ಪರಿಚಯ ಆಗಿದ್ದನು. ಸಾಕ್ಷಿಯು ನಾನು ಎಸ್.ಎಸ್.ಎಲ್.ಸಿ ಓದುತ್ತಿರುವಾಗಿನಿಂದಲೂ ಪರಿಚಯ ಎಂದು ಹೇಳುತ್ತಾರೆ. ಆರೋಪಿತನು ಕಾಲೇಜಿಗೆ ಹೋಗುವಾಗ ಮತ್ತು ಕಾಲೇಜಿನಿಂದ ಬರುವಾಗ ಮಾತನಾಡಿಸುತ್ತಿದ್ದನು. ಸದರಿ ಆರೋಪಿಯು ಮಾತನಾಡಿಸುವುದು ನನ್ನ ತಾಯಿ ನೋಡಿರಲಿಲ್ಲ, ಆದರೆ ನಾನು ನನ್ನ ತಾಯಿಗೆ ಹೇಳಿದೆನು, ಮತ್ತು ನನ್ನ ಊರಿನ ಕೆಲವು ಜನರಿಗೆ ಹೇಳಿರುತ್ತೇನೆ. ಆರೋಪಿತನು ನನಗೆ ಪ್ರೀತಿಸು ಎಂದು ನನಗೆ ಪತ್ರ ಕೂಡಾ ಕೊಟ್ಟಿದ್ದನು, ನಾನು ಆ ಪತ್ರ ಪೊಲೀಸರಿಗೆ ಕೊಟ್ಟಿರುವುದಿಲ್ಲ. ನಾನು ಸದರಿ ಪತ್ರದ ವಿಷಯ ನಮ್ಮ ತಾಯಿಗೆ ಗೊತ್ತಾದರೆ ನನ್ನನ್ನು ಓದಲು ಬಿಡುವುದಿಲ್ಲ ಎಂದು ಮತ್ತು ಮರ್ಯಾದೆ ಹೋಗುತ್ತದೆ ಎಂದು ಸದರಿ ಪತ್ರವನ್ನು ಸುಟ್ಟು ಹಾಕಿರುತ್ತೇನೆ ಎಂದು ಹೇಳುತ್ತಾಳೆ. ಪತ್ರ ಸುಟ್ಟು ಹಾಕಿದ ತಾರೀಖು ನನಗೆ ಹೇಳಲು ಆಗುವುದಿಲ್ಲ. ನಾನು ಆರೋಪಿ ಬರೆದ ಪ್ರೇಮ ಪತ್ರವನ್ನು ಘಟನೆಗಿಂತ ಮುಂಚ್ಚೆ ಸುಟ್ಟು ಹಾಕಿರುತ್ತೇನೆ. ಆರೋಪಿತನು ನನಗೆ ಪ್ರೇಮ ಪತ್ರ ಕೊಟ್ಟಿರಲಿಲ್ಲ, ಹಾಗೂ ನನ್ನನ್ನು ಪ್ರೀತಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತನು ನನ್ನನ್ನು ಹಿಂಭಾಲಿಸಿಕೊಂಡು ಬಂದಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಗೆ ಆರೋಪಿತನು ನನ್ನನ್ನು ಹಿಂಭಾಲಿಸುತ್ತಿದ್ದಾನೆ ಎಂದು ಬಹಳ ಸಾರಿ ಹೇಳಿರುತ್ತೇನೆ. ನಾನು ನಮ್ಮ ತಾಯಿಗೆ ಆರೋಪಿತನು ಹಿಂಭಾಲಿಸುತ್ತಿದ್ದಾನೆ ಎಂದು ಘಟನೆಗಿಂತ 4 ದಿವಸ ಮೊದಲು ಹೇಳಿರುತ್ತೇನೆ. ಆರೋಪಿತನು ಹಿಂಭಾಲಿಸುತ್ತಿದ್ದಾನೆ ಎಂದು ದೂರು ಕೊಟ್ಟಿಲ್ಲ ಎಂದು ಕೇಳಿದ್ದಕ್ಕೆ ಸಾಕ್ಷಿಯು ಮರ್ಯಾದೆಗೋಸ್ಕರ ದೂರು ಕೊಟ್ಟಿಲ್ಲ ಎಂದು ಹೇಳುತ್ತಾಳೆ. ಆರೋಪಿಗೆ ನಾನು ಬೈಯಿದ್ದೀನಿ ಎಂದು ನನಗೆ ಹೇಳಿರುತ್ತಾರೆ, ಆದರೆ ನನ್ನ ಸಮಕ್ಷಮಾ

ಆರೋಪಿಗೆ ನಮ್ಮ ತಾಯಿ ಬೈಯ್ದಿರುವುದಿಲ್ಲ. ಆರೋಪಿತನು ನಿಮ್ಮ ತಾಯಿಗೆ ಒಂದು ಗತಿಕಾಣಿಸುತ್ತೇನೆ ಎಂದು ಹೇಳಿದಾಗ ನಾನು ಅದರ ಬಗ್ಗೆ ಪೊಲೀಸರಿಗೆ ದೂರು ಕೊಟ್ಟಿರುವುದಿಲ್ಲ. ಸಾಕ್ಷಿ ಹೇಳುತ್ತಾರೆ ಮರ್ಯಾದೆ ಹೋಗುತ್ತದೆ ಎಂದು ದೂರು ಕೊಟ್ಟಿರುವುದಿಲ್ಲ. ಆರೋಪಿತನು ನಿಮ್ಮ ತಾಯಿಗೆ ಒಂದು ಗತಿಕಾಣಿಸುತ್ತೇನೆ ಎಂದು ನನಗೆ ಹೇಳಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಗೆ ದಿನಾಲೂ ಸಂಜೆ ವಾಕಿಂಗ್ ಹೋಗುವ ಅಭ್ಯಾಸ ಇತ್ತು. ನಮ್ಮ ತಾಯಿ ಸಾಯಂಕಾಲ 5.45 ರ ನಂತರ ವಾಕಿಂಗ್ ಗೆ ಹೋಗುತ್ತಿದ್ದರು. ನಮ್ಮ ಮನೆಯಲ್ಲಿ ಶೌಚಾಲಯದ ವ್ಯವಸ್ಥೆ ಇರುವುದಿಲ್ಲ. ನಾವು ಎಲ್ಲರೂ ಶೌಚಾಲಯಕ್ಕೆ ಹೊರಗಡೆ ಹೋಗುತ್ತೇವೆ. ನಮ್ಮ ಮನೆಯಲ್ಲಿ ಶೌಚಾಲಯದ ವ್ಯವಸ್ಥೆ ಇದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹದೇವಸ್ವಾಮಿ ಇವರು ನಮ್ಮ ತಾಯಿ ವಾಕಿಂಗ್ ಹೋದ ದಿವಸ ಸಾಯಂಕಾಲ 6.00 ಗಂಟೆಗೆ ನಮ್ಮ ಮನೆಗೆ ಬಂದಿದ್ದರು. ಮಹದೇವಸ್ವಾಮಿ ನನಗೆ ಹಣ ಕೊಟ್ಟು 2 ನಿಮೀಷಕ್ಕೆ ಹೊರಟು ಹೋದರು. ಮಹದೇವಸ್ವಾಮಿ ನನಗೆ, ನಿಮ್ಮ ತಾಯಿ ಎಲ್ಲಿ ಎಂದು ಕೇಳಿದ್ದಕ್ಕೆ, ನಾನು ನನ್ನ ತಾಯಿ ವಾಕಿಂಗ್ ಹೋಗಿರುತ್ತಾರೆ ಎಂದು ಹೇಳಿರುತ್ತೇನೆ. ಮಹದೇವಸ್ವಾಮಿ ಇವರು ಮನೆಗೆ ಹೋದ ನಂತರ ನಿಮ್ಮ ತಾಯಿ ಬಂದಿದ್ದಾರಾ ಎಂದು ನನಗೆ ಕೇಳಿರುತ್ತಾರೆ. ಮಹದೇವಸ್ವಾಮಿ ಇವರು ಮನೆಗೆ ಬಂದು ಹೋದ ನಂತರ ಅರ್ಧ ಗಂಟೆ ಬಿಟ್ಟು ಪೋನ್ ಮಾಡಿರುತ್ತಾರೆ. ನಮ್ಮ ತಾಯಿಯು ಬೆಳ್ಳಿಯ ಕಾಲ್ಗೇಜೆ ಚೈನು ಹಾಕಿರುತ್ತಾರೆ. ನಮ್ಮ ತಾಯಿಯು ಬೆಳ್ಳಿಯ ಕಾಲ್ಗೇಜೆ ಚೈನು ಹಾಕಿಕೊಂಡಿರಲಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯದ ಸಮಯ ಮುಗಿದರಿಂದ ಪಾಟೀಸವಾಲು ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು